ನುಡಿದಾಗ ಸೂರ್ಯ ಅಸಡ್ಡೆಯಿಂದ ತುಟಿ ವಕ್ರ ಮಾಡಿ ನಕ್ಕ.

'ಇಲ್ಲ.. ಅಪ್ಪ ಒಪ್ಪಲು ಸಾಧ್ಯನೇ ಇಲ್ಲಾ... ನಾನು ನಂಬಲ್ಲ..'

'ಇಲ್ಲ ಸೂರ್ಯ.... ನಿಜವಾಗಲೂ ಒಪ್ಪಿದ್ದಾರೆ' ಆದರ್ಶ ಒತ್ತಿ ನುಡಿದಾಗ ಸೂರ್ಯ ಕೆಲಕ್ಷಣ ಮೂಕನಾದ. ನಂತರ, 'ಅಮ್ಮನ ಒತ್ತಾಯಕ್ಕೆ, ಕಣ್ಣೀರಿಗೆ ಕರಗಿ ಒಪ್ಪಿರಬೇಕು.. ಇಲ್ದಿದ್ರೆ.. ಆ ವ್ಯಕ್ತಿ ನನ್ನನ್ನು ಸ್ವೀಕರಿಸಲು ಹೇಗೆ ಸಾಧ್ಯ..?' ಅವನ ಮಾತಿನ ಹಿಂದಿನ ಮರ್ಮ ಅರಿವಾಗದೇ ಹೋದರೂ, ಕನಿಷ್ಠ ಮನೆಗೆ ಬರಲು ಆತ ಅಂಗೀಕರಿಸಿಕೊಂಡ ಸಂಗತಿ ಅಪೂರ್ವಳಿಗೆ ಸಮಾಧಾನ ಮೂಡಿತು. ಸೂರ್ಯ ಮೌನವಾಗಿ ಕುಳಿತ ಬಳಿಕ, ಆದರ್ಶ ಮತ್ತೆ ಕಾರಿಗೆ ಚಾಲನೆ ನೀಡಿದ. ಮನೆ ತಲುಪಿದೊಡನೆ, ಸೂರ್ಯನನ್ನು ಒಳಗಿನ ಕೋಣೆಗೆ ಕರೆದೊಯ್ದು ಆದರ್ಶ, 'ಸೂರ್ಯ ನೀನು ಮನೆಯಿಂದ ತೆಗೆದುಕೊಂಡ ಹೋದ ಹಣ ಎಲ್ಲಿದೆ..? ದಯವಿಟ್ಟು ಹಿಂದಿರುಗಿಸು.. ಅಲ್ಲಿ ಅಂಕಲ್‌ನನ್ನು ಡಿಸ್ಚಾರ್ಜ್ ಮಾಡಲು ಹಣ ತರಲು ಅಂಕಲ್ ಅಪೂರ್ವನಿಗೆ ತಿಳಿಸಿದ್ದಾರೆ'.

'ನಾನು ಹಣ ಕದ್ದಿದ್ದೀನಿ ಅಂತ ಅವ್ರು ಹೇಳಿರಬೇಕಲ್ವಾ..?' ಸೂರ್ಯ ವ್ಯಂಗ್ಯವಾಗಿ ಅವಳತ್ತ ಕಣ್ಣು ಕೆಕ್ಕರಿಸಿ ನೋಡುತ್ತಾ ನುಡಿದ.

'ಇಲ್ಲ. ಈಗ್ತಾನೇ ನಿನ್ನನ್ನು ಮನೆಯಲ್ಲಿ ಇರಿಸಿಕೊಳ್ಳಲು ಒಪ್ಪಿರುವಾಗ, ಈ ಸಂಗತಿ ತಿಳಿಸಿ ಅವ್ರ ಮನಸ್ಸು ಕೆಡಿಸೋದು ಬೇಡ ಅಂತ ಅವ್ರು ಹೇಳಿಲ್ಲ. ನೀವೆಲ್ಲಾ ಜೊತೆಯಾಗಿ ಇರಬೇಕೂಂತ ಅಪೂರ್ವನೂ ಅಪೇಕ್ಷೆ ಪಡ್ತಾರೆ' ಆದರ್ಶ ಒತ್ತಿ ನುಡಿದಾಗ ಸೂರ್ಯನ ಮುಖದ ಮೇಲಿನ ಗಂಟು ಸಡಿಲವಾಯಿತು.

'ಸರಿ.. ಸರಿ.. ಸ್ವಲ್ಪ ಹಣ ಖರ್ಚಾಗಿದೆ.. ಉಳಿದದ್ದು ಇದರಲ್ಲಿದೆ.. ತಗೊಳ್ಳಿ..' ತನ್ನ ಕೈ ಚೀಲ ಮುಂದೆ ಹಿಡಿದ. ಸಿಕ್ಕಿದಷ್ಟು ಪುಣ್ಯ ಎಂದುಕೊಳ್ಳುತ್ತ ಆದರ್ಶ ಅವನ ಚೀಲ ಪಡೆದು ಅದರಲ್ಲಿದ್ದ ಹಣವನ್ನು ಅಪೂರ್ವನ ಕೈಗೆ ರವಾನಿಸಿದ. ಅವಳಿಗೂ ಸಮಾಧಾನವಾಗಿತ್ತು. ಸೂರ್ಯನಿಗೂ ನೆಲೆ ಸಿಕ್ಕಿರುವ ಬಗ್ಗೆ ತಿಳಿದ ನಂತರ ಆತ ಮೃದುವಾಗಿದ್ದು, ಅಪೂರ್ವ, ಆದರ್ಶರ ಅರಿವಿಗೆ ಬಂದಿತ್ತು.

'ನೀವು ರೆಸ್ಟ್ ತಗೊಳ್ಳಿ.. ನಾನೀಗ ಬರ್ತೀನಿ..' ಅಪೂರ್ವ ಹೊರ ನಡೆದಾಗ ಆದರ್ಶ ಅವಳನ್ನು ಹಿಂಬಾಲಿಸಿದ.

'ಅಪೂರ್ವ ನಾನಿನ್ನು ಹೊರಡ್ತೇನೆ.. ನಿಮ್ಮ ಪ್ರಾಬ್ಲಂ ಸಾಲ್ವ್ ಆಯ್ತಲ್ವಾ..?' ಎಂದ.

'ನಿಮ್ಗೆ ಹೇಗೆ ಧನ್ಯವಾದ ಹೇಳ್ಬೇಕೋ ತಿಳೀತಾ ಇಲ್ಲ.. ದೊಡ್ಡ ಸಮಸ್ಯೆಯೊಂದು ಪರಿಹಾರವಾಯಿತು' ಅಪೂರ್ವ ನುಡಿದಾಗ, ಆದರ್ಶನ ಮುಖ ಗಂಭೀರವಾಯಿತು.

'ಪರಿಹಾರವಾಯಿತೋ.. ಶುರುವಾಯಿತಾ..? ಸೂರ್ಯ ಇದೇ ಮನೇಲಿದ್ರೆ ನೀವು ಇಲ್ಲಿ ನೆಮ್ಮದಿಯಿಂದ ಇರಲು ಸಾಧ್ಯನಾ ಅಪೂರ್ವ..? ನಿಮ್ಮ ನೆರಳು ಕಂಡ್ರೇನೇ ಅವನು ಸಿಡಿಮಿಡಿಗೊಳ್ತಾನೆ.. ನಿಮ್ಮ ನೆಮ್ಮದಿಗೆ ಸಂಚಕಾರ ಬಂತು ಅಂತ ನನಗನಿಸ್ತಾ ಇದೆ'.

'ಅವ್ರ ಮನೇಲಿ ಅವ್ರು ಇರಬೇಕಾಗಿರೋದು ನ್ಯಾಯ ತಾನೇ? ಎಷ್ಟಾದರೂ ನಾನು ಈ ಮನೆಗೆ ಹೊರಗಿನವ್ಳು .. ಅವ್ರು ಹೇಳೋದು ಸರಿಯಾಗೇ ಇದೆ.. ಮನೆ ಮಗನನ್ನು ದೂರ ಇಟ್ಟು ಮನೆ ಮಗಳಂತೆ ನನ್ನನ್ನು ಕಾಣ್ತಾ ಇರೋದು ಅವ್ರಿಗೆ ಅಸಮಾಧಾನ ತಂದಿರಬಹುದು' ಎಂದವಳು ಕ್ಷಣ ನಿಲ್ಲಿಸಿ ನಂತರ ಮುಂದುವರಿಸಿ,

'ಸೂರ್ಯ ಏನೋ ಮಾಡಲು ಹೋಗಿ ಏನೋ ಮಾಡ್ಕೊಂಡು, ತನ್ನ ಜೀವನ ತಾನೇ ಕೈಯಾರೆ ಹಾಳು ಮಾಡಿಕೊಂಡ..ಒಂದ್ಸಲ ಆಕಸ್ಮಾತ್ ತಪ್ಪು ಆಗಿ ಬಿಡುತ್ತೆ.. ಆದ್ರೆ ತಪ್ಪಿಗೆ ಬದುಕು ಇಷ್ಟೊಂದು ದೊಡ್ಡ ಶಿಕ್ಷೆ ಕೊಡಬೇಕಾ ಆದರ್ಶ..? ಒಂದು ತಪ್ಪಿಗೆ ಜೀವ್ನ ಪೂರ್ತಿ ಶಿಕ್ಷೆ ಅನುಭವಿಸಬೇಕು ಅಂದ್ರೆ ಯಾವ ನ್ಯಾಯ..?' ಅಪೂರ್ವಳ ದನಿಯಲ್ಲಿ ಖೇದವಿತ್ತು. ಅವಳ ಮಾತಿನರ್ಥ ಆಗದವನಂತೆ ನೋಡಿದ ಆದರ್ಶ.

'ಕೊಲೆ ಮಾಡಿದ್ದಕ್ಕೆ ನಮ್ಮ ನ್ಯಾಯಾಂಗ ನೀಡಿದ ಶಿಕ್ಷೆ ಒಂದೆಡೆ ಆದರೆ, ಹೆತ್ತವರಿಂದ ತಿರಸ್ಕರಿಸಲ್ಪಟ್ಟಿರುವುದು.. ಅದಕ್ಕಿಂತ ಘೋರವಾದ ಶಿಕ್ಷೆ ಆದರ್ಶ.. ಅದೇ ನೋವು, ರೋಷವಾಗಿ, ಸೇಡಾಗಿ, ಸೂರ್ಯನ ಹೃದಯ ದಲ್ಲಿ ಗಾಯವಾಗಿ ಕೊರೀತಾ ಇದೆ. ಪ್ರತೀ ಮಾತಿನಲ್ಲಿ ಆ ನೋವು ಅವ್ರು ವ್ಯಕ್ತ ಪಡಿಸ್ತಾರೆ. ಅಂಕಲ್ ಆಗಲೀ, ಆಂಟಿಯಾಗಲೀ, ಜೈಲಿನಲ್ಲಿ ಒಂದ್ಸಲನೂ ಅವ್ರನ್ನ ನೋಡ್ಲಿಕ್ಕೆ ಹೋಗಿಲ್ವಂತೆ. ಬಿಡುಗಡೆಯಾದ್ಮೇಲೂ ಮನೆಗೆ ಕರೆ ತರಲು ಹೋಗ್ಲಿಲ್ವಂತೆ. ಬಾಲ್ಯದ ಅರಿಯದ ವಯಸ್ಸಲ್ಲಿ ಮಾಡಿದ ತಪ್ಪಿಗೆ ದೊಡ್ಡ ಶಿಕ್ಷೆ ಅನುಭವಿಸಬೇಕಾಯಿತು. ಅಪೂರ್ವ ಸೂರ್ಯನ ಮನಸ್ಥಿತಿಯನ್ನು ವಿಶ್ಲೇಷಿಸುತ್ತ ಅನುಕಂಪದ ದನಿಯಲ್ಲಿ ನುಡಿದಳು.

'ಅಪೂರ್ವ.. ನಿಮ್ಗೆ.. ಇನ್ನೊಂದು ಸಂಗತಿ ಗೊತ್ತಾ..?' ಆದರ್ಶ ನುಡಿದವನು, ಆ ಬಳಿಕ ಮಾತು ಮುಂದುವರೆಸಲು ಹಿಂಜರಿದ.

'ಏನಿಲ್ಲ ಬಿಡಿ'

'ಏನೋ ಹೇಳಲು ಹೋದವರು ನಿಲ್ಲಿಸಿದ್ರಲ್ವಾ.. ಏನದು ಹೇಳಿ.. ಪ್ಲೀಸ್..' ಅಪೂರ್ವಳ ಅಗ್ರಹಕ್ಕೆ ಆದರ್ಶ ಸೋಲಲಿಲ್ಲ.

'ಈಗ ಬೇಡ, ಸಮಯ ಬಂದಾಗ ನಿಮಗೇ ತಿಳಿಯುತ್ತೆ. ಈಗ ನಾನು ಏನೇ ಹೇಳಿದರೂ ತಪ್ಪಾಗುತ್ತೆ. ಸಂದರ್ಭ ಸರಿ ಇಲ್ಲ..' ಅಪೂರ್ವಳಿಗೆ ಕುತೂಹಲ ಮೂಡಿತಾದರೂ ಒತ್ತಾಯಿಸಲು ಇಚ್ಛೆ ಪಡಲಿಲ್ಲ.

'ಸೂರ್ಯನಿಗೆ ಈ ಮನೆಯ, ಆಸರೆ ಸಿಕ್ತಾ ಇದೆ.. ಮನೆಯವರು ಮನಸ್ಪೂರ್ವಕವಾಗಿ ಅವ್ನನ್ನು ಸ್ವೀಕರಿಸಿ ಆತ ಹೊಸ ಮನುಷ್ಯನಾಗಿ ಬದುಕಲು ಒಂದು ಅವಕಾಶ ಕೊಡಬೇಕು ಅಷ್ಟೇ..' ಆದರ್ಶ ನುಡಿದಾಗ ಅಪೂರ್ವಳ ಮನಸ್ಸು ಕೂಡ ಅದನ್ನೇ ಹಾರೈಸಿತು.

ಆದರ್ಶ ಸ್ವಲ್ಪ ಹೊತ್ತಿದ್ದು ಹೊರಟು ಹೋದ. ಸೂರ್ಯನ ಪ್ರಸ್ತುತತೆ, ವಸುಮತಿಯವರಿಗೂ ಇರುಸು ಮುರುಸು ತರಿಸಿತ್ತು. ಆ ದಿನ ಹೊರಡುವವರಿದ್ದ ಅವರು, ಪ್ರಭಾಕರರಾಯರು ಮರುದಿನ ಡಿಸ್ಚಾರ್ಜ್ ಆಗಿ ಬರುತ್ತಿದ್ದರಿಂದ, ಮರುದಿನವೇ ಹೋಗುವ ನಿರ್ಧಾರ ಮಾಡಿದರು.

'ಆ ಸೂರ್ಯ ಇರೋವಾಗ, ನಿನ್ನೊಬ್ಬಳನ್ನೇ ಹೇಗೆ ಬಿಟ್ಟು ಹೋಗೋದು..?' ಅವರ ಅಂಜಿಕೆ, ಅಪೂರ್ವಳಿಗೆ ಅರಿವಾಯಿತು. ಆದರೆ ಅಪೂರ್ವಳಿಗೆ, ಸೂರ್ಯ ಹೊರಟು ಹೋದರೇನು ಮಾಡುವುದು, ಅವನನ್ನು ತಡೆಯುವುದು ಹೇಗೆ ಎಂಬ ಚಿಂತೆ. ವಿಜಯಮ್ಮ ಬರುವ ತನಕ ಹೇಗೋ ಅವನನ್ನು ತಡೆದರೆ, ಸಂಭಾಳಿಸಿದರೆ, ತನ್ನ ಕರ್ತವ್ಯ ಮುಗಿಯಿತು. ಅನಂತರ ಹೇಗೋ, ಹೆತ್ತವರು ಅವನನ್ನು ನೋಡಿಕೊಳ್ಳುತ್ತಾರೆ.

ಹೊರಗೆ ಸುತ್ತಾಡಲು ಹೋಗಿದ್ದ ಶಂಕರ ಹಿಂದಿರುಗಿದವನು, ಆ ದಿನ ಅಲ್ಲೇ ಉಳಿಯುವ ವಿಚಾರ ತಿಳಿದು ಖುಷಿಗೊಂಡ. 'ಹಾಗಾದ್ರೆ, ನಾನು ಇನ್ನೊಂದು ಸ್ವಲ್ಪ ಸುತ್ತಾಡಿ ಬರ್ತಿದ್ದೆ.. ನನಗೊಂದು ಫೋನ್ ಮಾಡಿ ತಿಳಿಸೋದಲ್ವಾ..?' ಎಂದು ಆಕ್ಷೇಪಿಸಿದ.

ಸೂರ್ಯ ಹಾಲ್‌ನಲ್ಲಿ ಟಿ.ವಿ. ಹಾಕಿ ಕುಳಿತು ನೋಡುತ್ತಿದ್ದ. ಅವನ ವೇಷಭೂಷಣಕ್ಕೆ ಹೆದರಿ ಮಕ್ಕಳು, ಗಲಾಟೆ ಮಾಡದೇ ಮೂಲೆಯಲ್ಲಿ ಮುದುರಿ ಕುಳಿತವು. ಯಾರೂ ಮಾತನಾಡುವ ಗೋಜಿಗೆ ಹೋಗದೇ ತಮ್ಮ ಪಾಡಿಗೆ ತಾವಿದ್ದರು. ಅಪೂರ್ವ ರಾತ್ರೆ ಅವನಿಗೆ ಊಟ ಬಡಿಸಿ ಕರೆದಾಗ ಮರು ಮಾತನಾಡದೇ ಬಂದು ಉಂಡು ಎದ್ದು ಹೋಗಿದ್ದ.

ಆದರ್ಶ ರಾತ್ರೆ ಕರೆ ಮಾಡಿ ವಿಚಾರಿಸಿದ್ದ. 'ಹೇಗಿದೆ ಮನೆ ಪರಿಸ್ಥಿತಿ..?' ಸೂರ್ಯ ಯಾವ ತಕರಾರೂ ಮಾಡದೇ ಒಗ್ಗಿಕೊಂಡಿದ್ದಾನೆಂದು ತಿಳಿಸಿದಾಗ ಆದರ್ಶನೂ ನಿರಾಳನಾದ.

'ನಾಳೆ ನನಗೊಂದು ಸಹಾಯ ಮಾಡ್ತೀರಾ ಆದರ್ಶ..?'

'ಏನು ಹೇಳಿ..?'

'ಇಲ್ಲಿ ಬಂದ್ರೆ, ಕ್ಯಾಶ್, ಚೆಕ್‌ಬುಕ್ ಕೊಡ್ತೀನಿ. ಅಂಕಲ್‌ಗೆ ಮುಟ್ಟಿಸಿ. ಅವ್ರನ್ನ ಡಿಸ್ಚಾರ್ಜ್ ಮಾಡಿಸಿ ಮನೆಗೆ ತಲುಪಿಸಬೇಕು. ನಾನು ಇಲ್ಲಿಂದ.. ಹೊರಗೆ ಹೋಗುವಂತಿಲ್ಲ. ಅಂಕಲ್, ಆಂಟಿ ಬಂದು ಅವರಿಗೆ ಸೂರ್ಯನನ್ನು ಒಪ್ಪಿಸುವ ತನಕ ಸೂರ್ಯನ ಜವಾಬ್ದಾರಿ ನನ್ನದು. ನಾನು ಅಲ್ಲಿಗೆ ಬಂದಾಗ ಸೂರ್ಯ ಮನೆ ಬಿಟ್ಟು ಹೋದರೆ, ಅವ್ರಿಗೆ ನಾನು ಏನೆಂದು ಉತ್ತರ ಕೊಡಲಿ?' ಅವಳ ಸಂಕಟವನ್ನು ಆದರ್ಶ ಅರ್ಥ ಮಾಡಿಕೊಂಡ.

'ಆಗಲಿ... ನನಗೇನೂ ತೊಂದ್ರೆ ಇಲ್ಲ.. ನಾಳೆ ಬೆಳಿಗ್ಗೆ ಬಂದು ಕಲೆಕ್ಟ್ ಮಾಡಿ ಹೋಗ್ತೀನಿ.. ಗುಡ್ ನೈಟ್..' ಎಂದ. ಅಪೂರ್ವ ಕೂಡ ಗುಡ್ ನೈಟ್' ಎಂದು ಪ್ರತಿಕ್ರಿಯಿಸಿ ಫೋನ್ ಸಂಪರ್ಕ ಕಡಿದು ಹಿಂದಿರುಗಿದಾಗ ಸೂರ್ಯ ಅಲ್ಲೇ ಬಾಗಿಲಲ್ಲಿ ನಿಂತಿದ್ದ. ಅವನನ್ನು ಕಂಡ ಅಪೂರ್ವಳ ಮುಖ ವಿವರ್ಣಗೊಂಡಿತು.

(ಸಶೇಷ)